Hyderabad Karnataka Education Society's,

**Smt. Veeramma Gangasiri Degree College for Women,**

**Kalaburagi -585102**

# ***A Brief Report on Implementation of Technological flagship programme of MHRD under UBA in the adopted villages***

The Hyderabad Karnataka Education Society's, Smt. Veeramma Gangasiri Degree College for Women, Kalaburagi a participating institute (PI) under Unnat Bharat Abhiyan (UBA) of Ministry of Human Resource Development (MHRD) is actively involved in implementation of a flagship programmes in the adopted villages for the development through use of reasonably priced technologies. This programme plans to execute the technological solutions to the issues or problems faced by the rural community. The programme also predicts to link some students of our college from science course to issues related to rural community.

Five villages have been adopted by the college under the UBA programme viz., Hagarga, Tajsultanpur, Keribhosaga, Babalad sindagi and Nandur where the college UBA team decided to organize the activities related to reasonably priced technological implementation for the village development. The faculty and students of college UBA team actively participate in creating the awareness about the use of renewable energy source such a solar energy. The team also created awareness about the reasonably priced technologies for the improvement of the quality of life of the village community. Villagers are encouraged to participate in the UBA programme. Faculty members and students of Science course are involved in reasonably priced technological implementation for the village development. With the above activities in the village community would assure that there is a group of faculty members and students whom

they can approach for any problem in making the solar lamps and reasonably priced technological implementation for the village development.

On the 18th of October 2019, the faculty members of the college UBA cell along with the students visited the five adopted cluster of villages. They created awareness about the usage of solar lamps and also discussed with the villagers to understand their requirement and appraise them about the technological interventions which can be adopted by the college.

## ***<u>Glimpses of Awareness Campaign</u>***







ವಿಜಿ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರಿಂದ ಗ್ರಾಮೀಣ ಪ್ರದೇಶದಲ್ಲಿ ಜಾಥಾ

# ಸೌರಶಕ್ತಿ ಬಳಸಿ ಇಂಧನ ಉಳಿಸಿ



ಕಲಬುರಗಿ ನಗರದ ವಿಜಿ ಮಹಿಳಾ ಕಾಲೇಜು ವಿದ್ಯಾರ್ಥಿನಿಯರಿಂದ ಗ್ರಾಮೀಣ ಪ್ರದೇಶದಲ್ಲಿ ಸೌರಶಕ್ತಿ ಬಳಸಿ ಇಂಧನ ಉಳಿಸಿ ಜಾಥಾ ನಡೆಯಿತು. ಡಾ.ಶಾರದಾ ಬೆಕನಾಳ, ಡಾ ಮೀನಾಕ್ಷಿ ಬಾಳಿ, ಡಾ ನೀಲಕಂಠ ವಾಲಿ, ಡಾ.ಮೋಹನಕುಮಾರ ಪತ್ತಾರ ಇದ್ದರು. Vijaya Karnataka 19.10.2019

■ **ವಿಕ ಸುದ್ದಿಲೋಕ** ಕಲಬುರಗಿ

ನಗರದ ವೀರಮ್ಮ ಗಂಗಸಿರಿ ಮಹಿಳಾ ಮಹಾವಿದ್ಯಾನಿಲಯ ಮತ್ತು ಸ್ನಾತಕೋತ್ತರ ಕೇಂದ್ರ ವತಿಯಿಂದ ಹಮ್ಮಿಕೊಂಡಿದ್ದ ಜನಜಾಗೃತಿ ಜಾಥಾದಲ್ಲಿ 'ಸೌರಶಕ್ತಿ ಬಳಸಿ ಇಂಧನ ಉಳಿಸಿ' ಮತ್ತು ಪ್ಲಾಸ್ಟಿಕ್ ಮುಕ್ತ ಭಾರತ ಕುರಿತು ವಿದ್ಯಾರ್ಥಿನಿಯರು ಗ್ರಾಮೀಣ ಪ್ರದೇಶದಲ್ಲಿ ಜಾಗೃತಿ ಮೂಡಿಸಿದರು.

ಹಾಗರಗಾ, ಕೆರೆ ಬೋಸಗಾ, ಬಬಲಾದ ಸಿಂದಗಿ, ತಾಜಸುಲ್ತಾನಪುರ ಮತ್ತು ನಂದೂರು ಗ್ರಾಮಗಳಿಗೆ ತೆರಳಿ ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ-ಪರಿಸರ ರಕ್ಷಿಸಿ ಎಂದು ಗ್ರಾಮಸ್ಥರಲ್ಲಿ ಮನವಿ ಮಾಡಿಕೊಂಡರು. ಈ ಕುರಿತು ಕರಪತ್ರಗಳನ್ನು ಹಂಚಿದಲ್ಲದೆ ಮನೆ ಮನೆಗೂ ತೆರಳಿ ಪ್ಲಾಸ್ಟಿಕ್ ನಿಂದಾಗುವ ಹಾನಿ ಕುರಿತು ತಿಳಿ ಹೇಳಿದರು.

ಪ್ರತಿ ಗ್ರಾಮದಲ್ಲಿಯೂ ಪಥ ಸಂಚಲನ ನಡೆಸಿ ಪ್ಲಾಸ್ಟಿಕ್ ಮುಕ್ತ ಭಾರತ ಘೋಷಣೆಗಳನ್ನು ಹಾಕಿದರು. ಇನ್ನೊಂದು ತಂಡವು ಸೋಲಾರ್ ಚಾಲಿತ ದೀಪಗಳ ಕುರಿತು ತಿಳಿವಳಿಕೆ ನೀಡಿದರು.

ವಿದ್ಯಾರ್ಥಿನಿಯರಾದ ಸುರಕ್ಷಾ ಠಾಕೂರ್, ಸೌಜನ್ಯ, ಭಾಗ್ಯಶ್ರೀ, ಮಹೇಶ್ವರಿ, ಮೋಕ್ಷಾ ಸೇರಿ ಸುಮಾರು 50 ವಿದ್ಯಾರ್ಥಿನಿಯರು ಮತ್ತು ಹಾಗೂ ಹತ್ತು ಉಪನ್ಯಾಸಕರು ಪಾಲ್ಗೊಂಡಿದ್ದರು. ಉನ್ನತ ಭಾರತ ಅಭಿಯಾನದ ಸಂಯೋಜಕಿ ಡಾ. ಶಾರದಾ ಬೆಕನಾಳ, ಡಾ ಮೀನಾಕ್ಷಿ ಬಾಳಿ, ಡಾ ನೀಲಕಂಠ ವಾಲಿ, ಡಾ. ಮೋಹನಕುಮಾರ ಪತ್ತಾರ, ಡಾ ಮಹೇಶ ಗಂವಾರ, ಡಾ.ಶರಣಮ್ಮ ಕುಪ್ಪಿ, ಪ್ರೊ. ಶಿಲ್ಪಾ ಬಂದರವಾಡ, ಪ್ರೊ. ಮಂಗಲಾ ಬಿರದಾರ ಉಮಾ ರೇವೂರ ಮತ್ತು ಪ್ರವೀಣ ಮೂಲಗೆ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಸೌರಶಕ್ತಿ ಬಳಸಿ ಇಂಧನ ಉಳಿಸಿ ಜಾಗೃತಿ

## ವಿ.ಜಿ ಮಹಿಳಾ ಕಾಲೇಜಿನ ವಿದ್ಯಾರ್ಥಿಗಳಿಂದ ಹಳ್ಳಿಗಳಲ್ಲಿ ಪ್ಲಾಸ್ಟಿಕ್ ಮುಕ್ತ ಭಾರತ ಆಂದೋಲನ



ಕಲಬುರಗಿಯಲ್ಲಿ ನಡೆದ ವಿ.ಜಿ. ಮಹಾ ವಿದ್ಯಾಲಯ ಸ್ನಾತಕೋತ್ತರ ಕೇಂದ್ರದ ಗ್ರಾಮೀಣ ಜಾಗೃತಿ ಅಭಿಯಾನ ನೋಟಗಳು.

• **ಕನ್ನಡಪ್ರಭ ವಾರ್ತೆ** ಕಲಬುರಗಿ

ನಗರದ ವೀರಮ್ಮ ಗಂಗಸಿರಿ ಮಹಿಳಾ ಮಹಾವಿದ್ಯಾನಿಲಯಮತ್ತುಸ್ನಾತಕೋತ್ತರ ಕೇಂದ್ರವನ್ನು ಕೇಂದ್ರ ಸರ್ಕಾರ ಉನ್ನತ ಭಾರತ ಅಭಿಯಾನಕ್ಕೆ ಗುರುತಿಸಿದ್ದು, ಈ ಹಿನ್ನಲೆ ಕಾಲೇಜಿನ ವಿದ್ಯಾರ್ಥಿಗಳು ಸೌರಶಕ್ತಿ, ಸ್ವಚ್ಛ ಭಾರತ ಅಭಿಯಾನ ನಡೆಸಿ ಜನರಲ್ಲಿ ಜಾಗೃತಿ ಮೂಡಿಸಿದರು.

ಕಾಲೇಜಿನ ವಿದ್ಯಾರ್ಥಿನಿಯರು ಉನ್ನತ ಭಾರತ ಅಭಿಯಾನದ ಅಡಿಯಲ್ಲಿ ಗ್ರಾಮೀಣ ಪ್ರದೇಶಕ್ಕೆ ತೆರಳಿ ಉನ್ನತ ಭಾರತ ಅಭಿಯಾನದಲ್ಲಿ ಹತ್ತಾರು ಯೋಜನೆಗಳಿದ್ದು, ಅದರಲ್ಲಿ ಸೌರಶಕ್ತಿ ಬಳಸಿ ಇಂಧನ ಉಳಿಸಿ ಮತ್ತು ಪ್ಲಾಸ್ಟಿಕ್ ಮುಕ್ತ ಭಾರತ ಎಂಬ ಎರಡು ಯೋಜನೆಗಳ ಮಹತ್ವ ತಿಳಿಸಿದರು.

50 ವಿದ್ಯಾರ್ಥಿನಿಯರು ಮತ್ತು 10 ಜನ ಉಪನ್ಯಾಸಕರು ಸೇರಿಕೊಂಡು ಇಂದು ಹಾಗರಗಾ, ಕೆರೆ ಭೋಸಗಾ, ಬಬಲಾದ ಸಿಂದಗಿ, ತಾಜಸುಲ್ತಾನಪುರ ಮತ್ತು ನಂದೂರು ಗ್ರಾಮಗಳಿಗೆ ತೆರಳಿ ಅಲ್ಲಿ ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ರಕ್ಷಿಸಿ ಎಂದು ಮನವಿ ಮಾಡಿಕೊಂಡರು.

ಈ ಕುರಿತು ಕರಪತ್ರ ಹಂಚಿದಲ್ಲದೆ ಮನೆ ಮನೆಗೂ ತೆರಳಿ ಪ್ಲಾಸ್ಟಿಕ್ ನಿಂದಾಗುವ ಹಾನಿ ಜನರಿಗೆ ತಿಳಿಸಿ ಹೇಳಿದರು. ಅದೇ ಕಾಲಕ್ಕೆ ಪ್ರತಿಗ್ರಾಮದಲ್ಲಿಯೂ ಪಥ ಸಂಚಲನ ನಡೆಸಿ ಪ್ಲಾಸ್ಟಿಕ್ ಮುಕ್ತ ಭಾರತ ಘೋಷಣೆ ಕೂಗಿ ಅದರಿಂದಾಗುವ ಹಾನಿಯ ಕುರಿತು ಜಾಗೃತಿ ಮೂಡಿಸಿದರು.

ಇನ್ನೊಂದು ತಂಡವು ಸೋಲಾರ್ ಚಾಲಿತ ಬಲ್ಬ್‌ಗಳ ಕುರಿತು ತಿಳುವಳಿಕೆ ನೀಡಿತು. ಕಡಿಮೆ ಖರ್ಚಿನಲ್ಲಿ ಕೊಳ್ಳಬಹುದಾದ ಸೋಲಾರ್ ದೀಪಗಳ ಪ್ರಾತ್ಯಕ್ಷಿಕತೆ ತೋರಿಸಿದರು. ವಿದ್ಯಾರ್ಥಿನಿಯರಾದ ಸುರಕ್ಷಾ ಠಾಕೂರ್, ಸೌಜನ್ಯ, ಭಾಗ್ಯಶ್ರೀ, ಮಹೇಶ್ವರಿ, ಮೋಕ್ಷಾ ಮುಂತಾದವರು ಗ್ರಾಮಸ್ಥರನ್ನು ಉದ್ದೇಶಿಸಿ ಮಾತನಾಡಿದರು.

ಉನ್ನತ ಭಾರತ ಅಭಿಯಾನದ ಸಂಯೋಜಕ ಡಾ. ಶಾರದಾ. ಬೆಕನಾಳ, ಡಾ. ಮೀನಾಕ್ಷಿ ಬಾಳಿ, ಡಾ. ನೀಲಕಂಠ ವಾಲಿ, ಡಾ. ಮೋಹನಕುಮಾರ್ ಪತ್ತಾರ, ಡಾ. ಮಹೇಶ ಗಂವಾರ, ಡಾ. ಶರಣಮ್ಮ ಕುಪ್ಪಿ, ಪ್ರೊ. ಶಿಲ್ಪಾ ಬಂದರವಾಡ, ಪ್ರೊ. ಮಂಗಲಾ ಬಿರಾದರ ಮತ್ತು ಪ್ರವೀಣ್ ಮುಲಗೆ, ಪರಿಚಾರಕ ಮೌಲಪ್ಪ, ಕಾಲೇಜಿನ ಪ್ರಾಚಾರ್ಯ ಡಾ. ರಾಜೇಂದ್ರ ಪಾಲ್ಗೊಂಡಿದ್ದರು.